1948 (2372) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ಬಂದರು ಪ್ರದೇಶದ ಶರಾವತಿ ಅಳಿವೆಯಲ್ಲಿ ಹೂಳು ತುಂಬಿ ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಹೂಳು ತೆಗೆದು ಬಂದರು ಅಭಿವೃದ್ಧಿ ಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಈ ಕುರಿತು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹೌದು.

ಆ) **<u>ಶಾಶ್ವತ ಪರಿಹಾರಗಳಿಗೆ ವಿನ್ಯಾಸ ಪಡೆಯುವಿಕೆ</u> :**

ಶರಾವತಿ ನದಿಯ ಎಡದಂಡೆಯ ಮೇಲೆ ಕಾಸರಕೋಡ ಟೋಂಕಾದಲ್ಲಿರುವ ಹೊನ್ನಾವರ ಮೀನುಗಾರಿಕಾ ಬಂದರಿನ ಸಮಗ್ರ ಅಭಿವೃದ್ಧಿಗೆ ಹಾಗೂ ಅಳಿವೆ ಪ್ರದೇಶದಲ್ಲಿ ಹೂಳು ತುಂಬುವುದನ್ನು ತಡೆಗಟ್ಟಲು ಅಲೆ ತಡೆಗೋಡೆಗಳ ನಿರ್ಮಾಣಕ್ಕಾಗಿ ಈ ಪ್ರದೇಶದ ನದಿಗಳ ಮತ್ತು ಅರಬ್ಬೀ ಸಮುದ್ರ ಪಾತ್ರದ ಪೂರಕ ಮಾಹಿತಿ ಪಡೆದು ಅಧ್ಯಯನ ನಡೆಸಿ ಶಾಶ್ವತ ಪರಿಹಾರ ಸೂಚಿಸಲು ಭಾರತ ಸರಕಾರದ ಕೇಂದ್ರಿಯ ಜಲ ಮತ್ತು ಶಕ್ತಿ ಸಂಶೋಧನಾ ಕೇಂದ್ರ, ಖಿಡಕವಾಸಲಾ ಪುಣೆ, (CWPRS) ಅವರಿಗೆ ಈಗಾಗಲೇ ರೂ.10,061 ಲಕ್ಷಗಳನ್ನು ಏಪ್ರಿಲ್ 2005 ರಲ್ಲಿ ಪಾವತಿಸಲಾಗಿದೆ.

ಹಾಗೆಯೇ ಪೂರಕ ಮಾಹಿತಿಗಳನ್ನು ರೂ.9.50 ಲಕ್ಷಗಳ ವೆಚ್ಚದಲ್ಲಿ ಸಂಗ್ರಹಿಸಿ ಸದರಿ ಸಂಸ್ಥೆಗೆ ಮಾರ್ಚ್ 2006ರಲ್ಲಿ ನೀಡಲಾಗಿದೆ. ಸದರಿ ಸಂಸ್ಥೆಯಿಂದ ಅಧ್ಯಯನ ವರದಿ ಸ್ವೀಕೃತವಾದ ಮೇಲೆ ಸೂಕ್ತ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಪತ್ರಿಕೆ ತಯಾರಿಸಿ ಮಂಜೂರಾತಿಗಾಗಿ ಮೀನುಗಾರಿಕೆ ಇಲಾಖೆಗೆ ಸಲ್ಲಿಸಲಾಗುವುದು.

<u>ತಾತ್ಕಾಲಿಕ ಪರಿಹಾರ ಕಾರ್ಯ</u> :

ತಾತ್ಕಾಲಿಕ ಪರಿಹಾರ ಕಾರ್ಯವಾಗಿ ಹೂಳೆತ್ತುವ ಬಗ್ಗೆ ರೂ.52.00 ಲಕ್ಷ ವೆಚ್ಚದ ವಿವರವಾದ ಅಂದಾಜು ಪತ್ರಿಕೆ ತಯಾರಿಸಲಾಗಿದ್ದು, ಮಂಜೂರಾತಿ ಹಾಗೂ ಸಾಕಷ್ಟು ಅನುದಾನ ಲಭ್ಯವಾದ ಕೂಡಲೇ ಹೂಳೆತ್ತುವ ಕಾರ್ಯವನ್ನು ಶೀಘ್ರದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಇ) M/s. CWPRS ಪುಣೆ ಸಂಸ್ಥೆಯವರಿಂದ ನಿರೀಕ್ಷಿತ ಅಧ್ಯಯನ ವರದಿ ಪ್ರಾಪ್ತವಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಮತ್ತು ತಾತ್ಕಾಲಿಕ ಪರಿಹಾರವಾಗಿ ಹೂಳೆತ್ತಲು ರೂ.52.00 ಲಕ್ಷಗಳ ಮೊತ್ತದ ಹೂಳೆತ್ತುವ ಕಾಮಗಾರಿಯ ಅಂದಾಜು ಪಟ್ಟಿಗೆ ಮೀನುಗಾರಿಕೆ ಇಲಾಖೆಯ ನಿರ್ದೇಶಕರಿಂದ ಮಂಜೂರಾತಿ ಮತ್ತು ಸಾಕಾಗುವಷ್ಟು ಅನುದಾನ ಲಭ್ಯವಾದ ಕೂಡಲೇ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

1949 (2373) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕು ಅತಿದೊಡ್ಡ ತಾಲ್ಲೂಕವಾಗಿದ್ದು ಸಾರಿಗೆ ಸೌಕರ್ಯಕ್ಕಾಗಿ ಕರ್ನಾಟಕ ರಸ್ತೆ ಸಾರಿಗೆ ಬಸ್ ಘಟಕವನ್ನು ಈವರೆಗೆ ಸ್ಥಾಪಿಸಿಲ್ಲದಿರುವುದಕ್ಕೆ ಕಾರಣಗಳೇನು;

ಆ) ಬಸ್ ಘಟಕವಿಲ್ಲದೆ ನಾಗರೀಕರು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಬಸ್ ಘಟಕ ಸ್ಥಾಪನೆಗಾಗಿ ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಯಾವಾಗ ಬಸ್ ಘಟಕ ಸ್ಥಾಪಿಸಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು):

ಅ) ಸಂಸ್ಥೆಯು ಯಾವುದೇ ನಿವೇಶನ ಹೊಂದಿರುವುದಿಲ್ಲ.

ಆ) ಪ್ರಸ್ತುತ ಹೊನ್ನಾವರದಿಂದ ಕುಮುಟಾ ಮತ್ತು ಭಟ್ಕಳ ಬಸ್ ಘಟಕಗಳು ಕ್ರಮವಾಗಿ 20 ಹಾಗೂ 35 ಕಿ.ಮೀ. ದೂರದಲ್ಲಿದ್ದು, ಹೊನ್ನಾವರ ಹಾಗೂ ತಾಲ್ಲೂಕಿನ ಸುತ್ತಮುತ್ತಲಿನ ಹಳ್ಳಿಗಳ ನಾಗರೀಕರಿಗೆ ಸಮರ್ಪಕ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಇ) ಬಸ್ ಘಟಕ ಸ್ಥಾಪನೆಗಾಗಿ ನಿವೇಶನವನ್ನು ಒದಗಿಸಲು ಅರಣ್ಯ ಇಲಾಖೆಯನ್ನು ಕೋರಲಾಗಿದ್ದು, ನಿವೇಶನ ಪಡೆಯುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಈ) ನಿವೇಶನ ಸಂಸ್ಥೆಯು ವಶಕ್ಕೆ ಪಡೆದ ನಂತರ ಸಂಸ್ಥೆಯ ಹಣಕಾಸಿನ ಪರಿಸ್ಥಿತಿಗನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

1950 (2374) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ಪಟ್ಟಣದ ಮಧ್ಯಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಹೆಗಡೆ ಕ್ರಾಸಿನಿಂದ ಚಿತ್ರಿಗಿ ಗುಂದದ ಮೂಲಕ ಸಮುದ್ರ ಸೇರುವ ಹಂದಿಹಳ್ಳ ಎಂದು ಕರೆಯಲ್ಪಡುವ ಹಳ್ಳದಲ್ಲಿ